1	2	3	4
25	ಧಾರವಾಡ	ಧಾರವಾಡ	3049–29
		ಹುಬ್ಬಳ್ಳಿ	539–22
		ನವಲ್‌ಗುಂದ	17–01
		ಕಲಘಟಗಿ	14–19
		ಕುಂದಗೋಳ	20–27
		ಒಟ್ಟು	**3641–18**
26	ಕೋಲಾರ	ಬಂಗಾರಪೇಟೆ	88–00
		ಕೋಲಾರ	164–26
		ಮಾಲೂರು	391–32
		ಚಿಕ್ಕಬಳ್ಳಾಪುರ	96–00
		ಒಟ್ಟು	**740–18**
	ಜುಮ್ಲಾ		**61979–09**
		BMIC ಯೋಜನೆ	
1	ಬೆಂಗಳೂರು ನಗರ ಜಿಲ್ಲೆ		2744–35
	ಬೆಂಗಳೂರು ಗ್ರಾಮಾಂತರ ಜಿಲ್ಲೆ		22–20
		ಒಟ್ಟು	**2767–15**
	ಒಟ್ಟು		**64746–21**

820 (992) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಹೊರಗಿನಿಂದ ಬಂದಿರುವ ಖಾಸಗಿ ಕಾರ್ಖಾನೆಗಳೆಷ್ಟು ,

ಆ) ಈ ಕಾರ್ಖಾನೆಗಳಲ್ಲಿರುವ ಒಟ್ಟಾರೆ ಕಾರ್ಮಿಕರ ಸಂಖ್ಯೆ ಎಷ್ಟು ,

ಇ) ಖಾಸಗಿ ಕಾರ್ಖಾನೆಗಳಲ್ಲಿ ಕನ್ನಡಿಗರನ್ನೇ ನೇಮಕ ಮಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಈ) ಈ ಕಾರ್ಖಾನೆಗಳಲ್ಲಿ ಕನ್ನಡಿಗರನ್ನು ನೇಮಕ ಮಾಡಿಕೊಳ್ಳಲು ಡಾ ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರ ಜಾರಿಗೆ ತರಲಾಗುವುದೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಉತ್ಪಾದನಾ ಕ್ಷೇತ್ರದಲ್ಲಿ ಒಟ್ಟು 71 ಬಹು ರಾಷ್ಟ್ರೀಯ ಕೈಗಾರಿಕಾ ಘಟಕಗಳು ಬಂದಿರುತ್ತದೆ

ಆ) 21872

ಇ) ಕೈಗಾರಿಕಾ ನೀತಿಯನ್ವಯ ಕೈಗಾರಿಕೆಗಳಿಗೆ ನೀಡಲಾಗುವ ಸೌಲಭ್ಯ ರಿಯಾಯಿತಿಗಳನ್ನು ಡಾ ಸರೋಜಿನಿ ಮಹಿಷಿ ವರದಿಯನ್ವಯ ಕನ್ನಡಿಗರಿಗೆ ಸ್ಥಳೀಯರಿಗೆ ಉದ್ಯೋಗ ನೀಡಿದಲ್ಲಿ ಮಾತ್ರ ಕೈಗಾರಿಕಾ ಘಟಕಗಳಿಗೆ ನೀಡಲಾಗುವುದೆಂಬ ನಿಬಂಧನೆಯನ್ನು ಅವುಗಳಿಗೆ ನೀಡುವ ಸೌಲಭ್ಯ ರಿಯಾಯಿತಿ ಮಂಜೂರಾತಿ ಆದೇಶಗಳಲ್ಲಿ ನಮೂದಿಸಲಾಗುತ್ತಿದೆ

ಸದರಿ ಘಟಕಗಳು ಕನ್ನಡಿಗರನ್ನು / ಸ್ಥಳೀಯರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ದೃಢಪಡಿಸಿಕೊಳ್ಳಲು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ

ಈ) ಒಟ್ಟು 71 ಬಹು ರಾಷ್ಟ್ರೀಯ ಕೈಗಾರಿಕಾ ಘಟಕಗಳ ಪೈಕಿ 5 ಘಟಕಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರಗಳಿಂದ ನೋಟೀಸನ್ನು ಜಾರಿ ಮಾಡಿ ಡಾ ಸರೋಜಿನಿ ಮಹಿಷಿ ವರದಿಯಂತೆ ಕನ್ನಡಿಗರಿಗೆ/ ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಮತ್ತು ಈಗಿರುವ ಕೊರತೆಯನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಲಾಗಿದೆ ವರದಿ ಬಂದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು

921 (1248) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೂ ಎಷ್ಟು ಜನ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸಲಾಗಿದೆ ,

ಆ) ಯಾವ ಆಧಾರದ ಮೇಲೆ ಕನ್ನಡಿಗರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ ,

ಇ) ಶೇಕಡವಾರು ಎಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಕಾಯ್ದಿರಿಸಲಾಗಿದೆ ,

ಈ) ಕನ್ನಡಿಗರಿಗೆ ಉದ್ಯೋಗ ನೀಡದಿರುವ ಕೈಗಾರಿಕೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೂ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ 892 ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ 2,51,445 ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸಿ ಕೊಡಲಾಗಿದೆ